ಬೀದರ್ ನಗರದ ಸುತ್ತಲಿನಲ್ಲಿ ವಾಸಿಸುವ ಜನರಿಗೆ ಬಸ್ ವ್ಯವಸ್ಥೆ

2187 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರದ 20 ಕಿ.ಮೀ.ಗಳ ಸುತ್ತಲಿನಲ್ಲಿ ವಾಸಿಸುವ ಜನರಿಗೆ ಈಗಿನ ಬಸ್ ವ್ಯವಸ್ಥೆಯು ಅನುಕೂಲವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂತಹ ಅನುಕೂಲತೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಅಗತ್ಯ ಸಂಖ್ಯೆಯ ಬಸ್ಸುಗಳನ್ನು ಒಡಿಸಲಾಗುತ್ತಿದೆ.

ಗ್ರಾಮಾಂತರ ಪ್ರದೇಶದ ಹಳ್ಳಿಗಳಿಗೆ ವಿದ್ಯುತ್ ಸೌಕರ್ಯ ಒದಗಿಸಿಕೊಡುವುದು

2494 - ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶದ ಹಳ್ಳಿಗಳ ಬಡಾವಣೆಗಳಲ್ಲಿ ವಿದ್ಯುತ್ ಸೌಕರ್ಯ ಹೊಂದಲು ನಿರ್ಬಂಧಿಸಿದೆಯೇ ಹಾಗಿದ್ದರೆ ಕಾರಣವೇನು?

ಆ) ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣಗೊಂಡ ಹರಿಜನ ಕಾಲೋನಿ ಹಾಗೂ ದುರ್ಬಲ ವರ್ಗಗಳ ಕಾಲೋನಿಗಳಲ್ಲಿ ವಾಸಿಸುವ ಜನರ ಬೇಡಿಕೆ ಇದ್ದರೂ ಈವರೆಗೆ ವಿದ್ಯುತ್ ಸೌಕರ್ಯ ಪಡೆಯಲಾಗಿಲ್ಲ. ಅಂದರೆ ಇಲ್ಲಿ ವಾಸಿಸುವ ಜನರಿಗೆ ಇದರ ಅವಶ್ಯಕತೆ ಇಲ್ಲವೆಂದು ಸರ್ಕಾರದ ಭಾವನೆಯೇ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು)

ಅ) ಇಲ್ಲ

ಆ) ಹರಿಜನ ಕಾಲೋನಿ ಹಾಗೂ ದುರ್ಬಲ ವರ್ಗಗಳ ಕಾಲೋನಿಗಳ ವಿದ್ಯುದ್ದೀಕರಣದ ಕಾರ್ಯವನ್ನು ಮಂಡಳಿಯು ತಾನು ಹಾಕಿಕೊಂಡಿರುವ ವಾರ್ಷಕ ಗುರಿಯಂತೆ ನಿರ್ವಹಿಸುತ್ತಿರುತ್ತದೆ. ಈ ವರ್ಷ 600 ಹರಿಜನ ಬಸ್ತಿಗಳನ್ನು ವಿದ್ಯುದ್ದೀಕರಿಸಲು ಗುರಿ ಹಾಕಿಕೊಂಡಿದೆ. ಅದರಂತೆ ಕೆಲಸ ಕಾರ್ಯಗಳು ಸಾಗುತ್ತಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1956ನೇ ಇಸವಿಯ ಕಂಪನಿಗಳ ಶಾಸನದ 619 (ಎ) ಕಲಮಿನ ಮೇರೆಗೆ : "1988-89ನೇ ಇಸವಿಯ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 19ನೇ ವರದಿಯನ್ನು ಸಭೆಯ ಮುಂದಿಡುತ್ತೇನೆ."

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕೋಲಾರ ಜಿಲ್ಲೆ ಶ್ರೀನಿವಾಸಪುರದಲ್ಲಿ ರೈತರ ಮೇಲೆ ಹಲ್ಲೆ ನಡೆದಿದೆ, ಅಲ್ಲಿನ ರಾಜಕೀಯ ಮುಖಂಡರ ಮೇಲೆ ಧಾಳಿ ನಡೆದಿದೆ. ಸರ್ಕಾರ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಮತ್ತು ಉತ್ತರ ಕೊಡಬೇಕು. ಅಲ್ಲಿ ನಾವು ನೋಡಿದ್ದೇವೆ. ಬಹಳ ದೊಡ್ಡ ದುರಂತ ನಡೆದಿದೆ, ಅಲ್ಲಿ ಹೊಡೆದಿದ್ದಾರೆ.....